Unauthorised cultivation of waste land in supa Taluk

65 SRI V.M. GHADI (Haliya).—Will the Minister for Revenue be pleased to state.—

(*a*) whether it is a fact that nearly 200 acres of Government waste land is under cultivation for the last 20 years in the villages of Birampli, Gavegali, Pradhani, Fansoli, Avurli and Sadsa in Supa taluk ;

(*b*) whether it is a fact that some of the encroachments in the area were regularised in or about the year 1967 by Government ;

(*c*) whether it is a fact that some of these encroachers have paid levy in foodgrain to Government and requested the Government to regularise the encroachments as they have no other means of livelihood ;

(*d*) whether it was represented to Government that the actua helpless cultivators may be granted land and the encroachment be regularied ;

(*e*) if so, the decision taken by Government in the matter ?

SRI N. HUTCHAMASTHI GOWDA (Minister for Revenue).—

(*a*) Yes.
(*b*) No.
(*c*) Yes.
(*d*) Yes.

(*e*) In view of the Karnataka Land Revenue (Second Amendment) Ordinace, 1975, deleting Sec 94-A of Karnataka Land Revenue Act, 1964, the question of regularisation of unauthorised occupations does not arise.

ಶ್ರೀ ವಿ. ಎಂ. ಘಾಡಿ.—ಸ್ವಾಮಿ, 1968ನೇ ಇಸವಿ ಅಥವಾ ಅದಕ್ಕಿಂತ ಪೂರ್ವದಲ್ಲಿ ಯಾರು ಯಾರು ಜಮೀನನ್ನು ಅತಿಕ್ರಮಣ ಮಾಡಿಕೊಂಡಿದ್ದರು ಅದರ ಬಗ್ಗೆ ಅವರಿಗೆ ರೆಗ್ಯುಲರೈಸ್ ಮಾಡುವ ಬಗ್ಗೆ ತಾವು ಏನಾದರು ಆರ್ಡರ್ಸ್ ಹೊರಡಿಸಿದ್ದೀರಾ ?

† ಶ್ರೀ ಎನ್. ಹುಚ್ಚಮಾಸ್ತಿಗೌಡ.—ತಮಗೆ ಉತ್ತರದಲ್ಲೇ ಸ್ಪಷ್ಟವಾಗಿ ರೆಗ್ಯುಲರೈಸ್ ಮಾಡಿಲ್ಲ ಎಂದು ಹೇಳಿದ್ದೇನೆ.

ಶ್ರೀ ವಿ. ಎಂ. ಘಾಡಿ.—ಸ್ವಾಮಿ ನಾನು ಕೇಳುತ್ತಾ ಇರುವುದು 1968ರ ಪೂರ್ವದಲ್ಲಿ ಯಾರು ಯಾರು ಜಮೀನನ್ನು ಅತಿಕ್ರಮಣ ಮಾಡಿಕೊಂಡಿದ್ದರು ಅದರ ಬಗ್ಗೆ ಅವರಿಗೆ ರೆಗ್ಯುಲರೈಸ್ ಮಾಡುವುದಕ್ಕೆ ಆರ್ಡರ್ ಇದೆಯೇ ಎಂದು ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಈಗ ಅದರಲ್ಲಿ ಕೆಲವು ಬದಲಾವಣೆ ಆಗಿರುವುದನ್ನು ಸರ್ಕಾರದವರು ಕೊಟ್ಟಿರಬಹುದು. ಆದರೆ ರ್ಯಾಂಡ್ ರೆವಿನ್ಯೂ ಆ್ಯಕ್ಟ್‌ನಲ್ಲಿ 1.7.1968ಕ್ಕೆ ಮುಂಚೆ ಇದ್ದಂಥದನ್ನು ಗಮನಕ್ಕೆ ತೆಗೆದುಕೊಳ್ಳಬೇಕಾಗಿಲ್ಲ. ಹಾಗೆ ಈಗ ಬದಲಾವಣೆ ಆಗಿರುವುದನ್ನು ಕನ್‌ಫರಮ್ ಮಾಡಲೇ ಬೇಕು ಎನ್ನುತಕ್ಕದ್ದು ಕಲ್ಸನೆ ಇಲ್ಲ.

ಶ್ರೀ ಬಿ. ವಿ. ಕಕ್ಕಿಲಾಯ.—ಸ್ವಾಮಿ, ತಾವು (ಉ) ವಿಭಾಗದಲ್ಲಿ ಈ ರೀತಿ ಹೇಳಿದ್ದೀರಿ. ಲ್ಯಾಂಡ್ ರೆವಿನ್ಯೂ ಆ್ಯಕ್ಟ್‌ಗೆ ತಿದ್ದುಪಡಿ ಆಗಿರುವುದರಿಂದ ಇದನ್ನು ಮಾಡುವ ಅವಶ್ಯಕತೆ ಉದ್ಭವಿಸುವುದಿಲ್ಲ ಎಂದು ಹೇಳಿದ್ದೀರಿ. ಅಲ್ಲದೇ ಈ ರೀತಿ ಅನೇಕ ಕೇಸುಗಳು ಇರುವುದರಿಂದ ರೆಗ್ಯುಲರೈಸ್ ಮಾಡುವ ಅವಶ್ಯಕತೆ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಆಗ ಪರಿಸ್ಥಿತಿ ಏನಾಗಿತ್ತು ಎಂದರೆ ಯಾರು ಬೇಕಾದರೂ ಸರ್ಕಾರದ ಜಮೀನನ್ನು ಯಾವ ಹೆದರಿಕೆ ಇಲ್ಲದೇ ಅತಿಕ್ರಮಣ ಮಾಡಿಕೊಳ್ಳುವ ಪರಿಸ್ಥಿತಿ ಬಂದಿತ್ತು. ಸ್ಥಳದಲ್ಲೇ ಇರತಕ್ಕ ಸಣ್ಣ ಸಣ್ಣ ಅಧಿಕಾರಿಗಳನ್ನು ಹಿಡಿದುಕೊಂಡು 1.7.1968ಕ್ಕೆ ಮುಂಚೆ ಅವರ ಸ್ವಾಧೀನದಲ್ಲಿ ಇತ್ತು ಎಂಬುದಾಗಿ ಕಾಗದ ಪತ್ರಗಳನ್ನು ಬರೆಯಿಸಿ ರೆಕಾರ್ಡ್ ಮುಂದು ವರೆಸಿಕೊಂಡು ಬಂದುದರಿಂದ ಈ ತಿದ್ದುಪಡಿ ತಂದಿರುವುದು.

ಶ್ರೀ ಪಿ. ಎಂ. ಘಾಡಿ.—ಸ್ವಾಮಿ ನಮ್ಮ ನೂಪಾ ತಾಲೋಕಿಗೆ ಮಾನ್ಯ ಡೆಪ್ಯುಟಿ ಸ್ಪೀಕರ್ ಅವರನ್ನು ಕರೆದುಕೊಂಡು ಹೋದಾಗ ಅಲ್ಲಿರತಕ್ಕ ಬಡ ಜನರನ್ನು ತೋರಿಸಿದ್ದೇನೆ. ಅಲ್ಲಿ ತುಂಬಾ ಬಡ ಜನರು ಇದ್ದಾರೆ, ಆದುದರಿಂದ ಅಂತಹವರ ಪರಿಸ್ಥಿತಿಯನ್ನು ಗಮನದಲ್ಲಿ ಇಟ್ಟುಕೊಂಡು ರೆಗ್ಯುಲರೈಸ್ ಮಾಡುವುದಕ್ಕೆ ಮನಸ್ಸು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಈಗ ಇದು ಏನಾಗಿದೆ ಎಂದರೆ, ಇದು ಗೇಮ್ ಸ್ಯಾಂಕ್ಚುಯರಿ ಏರಿಯಾದಲ್ಲಿ ಇರುವುದರಿಂದ, ಅರಣ್ಯ ಇಲಾಖೆಯ ತಜ್ಞಾರ ಅಭಿಪ್ರಾಯ ಇದನ್ನು ಗೇಮ್ ಸ್ಯಾಂಕ್ಚುಯರಿ ಏರಿಯಾಕ್ಕೆ ಸೇರಿಸಬೇಕು ಎಂದು ಸ್ಪಷ್ಟವಾಗಿದೆ. ಈಗ ಮಾನ್ಯ ಸದಸ್ಯರು ತಮ್ಮ ಅಭಿಪ್ರಾಯವನ್ನು ತಿಳಿಸಿದರು. ನೂಪಾದಲ್ಲಿ ವಾಹನಗಳ ಸಂಚಾರದಿಂದ ಮತ್ತು ಮದ್ದುಗಳ ಶಬ್ದದಿಂದ ಗರಾಟೆಯಾಗಿ ಪ್ರಾಣಿಗಳು ಆಲ್ಲಿಂದ ಹೊರಟು ಹೋಗಿವೆ ಅಲ್ಲಿ ಗೇಮ್ ಸ್ಯಾಂಕ್ಚುಯರಿ ಮಾಡುವ ಅವಶ್ಯಕತೆ ಇಲ್ಲ ಎಂದು ಹೇಳುತ್ತಿದ್ದಾರೆ. ಈಗ ಅಲ್ಲಿ ಒಂದು ಪಕ್ಷ ಪೂರ್ವ ವನ್ಯ ಮೃಗಗಳು ಇಲ್ಲ ಎಂದು ಕೇಳುತ್ತಿದ್ದಾರೆ, ಆದರೆ ಈ ಪ್ರದೇಶವನ್ನು ಗೇಮ್ ಸ್ಯಾಂಕ್ಚುಯರಿಯಾಗಿ ಉಳಿಸಿಕೊಳ್ಳಬೇಕು ಎಂದು ಅಭಿಪ್ರಾಯ ಇರುವುದರಿಂದ ಅವರು ಹೇಳುವ ವಿಷಯವನ್ನು ಕನ್‌ಫರಮ್ ಮಾಡುವ ಪರಿಸ್ಥಿತಿ ಇಲ್ಲ ಎಂದು ಹೇಳುತ್ತೇನೆ.

Construction of Tourist Bungalow of Chintamani Town

76 SRI CHOWDA REDDY (Chintamani).—Will the Minister for Transport and Tourism be pleased to state:—

(*a*) whether it is not a fact that amount has been provided in the Budget for the construction of a Tourist Bungalow at Chintamani Town, Kolar District ;

(*b*) if so, the reason for the delay in taking up the construction work or the said building so far ?

SRI MD. ALI MEHTAB ALI (Minister for Transport and Tourism).—

(*a*) No.

(*b*) Does not arise in view of reply to clause (*a*).

ಶ್ರೀ ಚೌಡರೆಡ್ಡಿ.—ಸ್ವಾಮಿ, ಚಿಂತಾಮಣಿ ಟೌನ್ ವಿಭಾಗವು ವ್ಯಾಪಾರ ಸ್ಥಳವಾಗಿರುವುದರಿಂದ ಅಲ್ಲಿ ಒಂದು ಪ್ರವಾಸಿ ಬಂಗಲೆಯನ್ನು ನಿರ್ಮಿಸುವ ಬಗ್ಗೆ ಎಸ್ಟಿಮೇಟ್ ಕಳಿಸಿರುವುದು ನಿಜವೆ ? ಅದು ನಿಜವಾದಲ್ಲಿ ಅದರ ಎಸ್ಟಿಮೇಟ್ ಎಷ್ಟು ಎಂದು ತಿಳಿಸಬೇಕಾಗಿ ಪ್ರಾರ್ಥಿಸುತ್ತೇನೆ